**Crl.Mis.No. 274/2017**
**ಪಿ.ಡಬ್ಲೂ-01**

**ದಿನಾಂಕಃ 28.08.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ವಾಟೀ ಸವಾಲು ಃ- ಶ್ರೀ MLD ಎದುರುದಾರರ ಪರ** ವಕೀಲರಿಂದ .

ಅರ್ಜಿಯಲ್ಲಿ ರೂ.10ಲಕ್ಷ ಖರ್ಚು ಮಾಡಿ ವಿವಾಹ ಮಾಡಿಕೊಟ್ಟಿರುತ್ತೇವೆ ಎಂದು ಹೇಳಿದ್ದು ಆದರೆ ನಿಪಿ-8ರ ದೂರಿನಲ್ಲಿ ರೂ. 25ಲಕ್ಷ ಖರ್ಚು ಮಾಡಿ ವಿವಾಹ ಮಾಡಿಕೊಟ್ಟಿರುತ್ತೇವೆ ಎಂದು ಹೇಳಿದ್ದು ಯಾವುದು ಸರಿ ಎಂದರೆ ಸಾಕ್ಷಿ ರೂ. 25 ಲಕ್ಷ ಹಣ ಖರ್ಚು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಹಾಗಾದರೆ ಅರ್ಜಿಯಲ್ಲಿ ರೂ. 10 ಲಕ್ಷ ಎಂದು ಹೇಳಿರುವುದು ಸುಳ್ಳು ಎಂದರೆ ಸಾಕ್ಷಿ ಉತ್ತರ ನೀಡದೆ ಸಮ್ಮನೆ ಇರುತ್ತಾರೆ. ನೀವು ರೂ.10 ಲಕ್ಷ ಹಾಗೂ ರೂ.25 ಲಕ್ಷ ಹಣವನ್ನು ಖರ್ಚು ಮಾಡಿ ವಿವಾಹ ಮಾಡಿಕೊಟ್ಟಿರುವುದಿಲ್ಲ ಆ ಕಾರಣದಿಂದಲೇ ನೀವು ಉತ್ತರ ನೀಡದೆ ಸುಮ್ಮನೆ ಇದ್ದೀರಿ ಎಂದರೆ ಸಾಕ್ಷಿ ರೂ.25 ಲಕ್ಷ ಹಣ ಖರ್ಚು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ-1ರ ವಿವಾಹ ಆಮಂತ್ರಣ ಪತ್ರಿಕೆಯನ್ನು ಎರಡೂ ಜನ ಸೇರಿ ಜಂಟಿಯಾಗಿ ಮಾಡಿಸಿರುವುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ವಿವಾಹ ಆಮಂತ್ರಣ ಪತ್ರಿಕೆಯನ್ನು ಎದುರುದಾರರೆ ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ನನ್ನ ತಂದೆಯವರು ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-16 ರ ಮೊದಲನೆ ಪೋಟೋದಲ್ಲಿ 2 ಕುಟುಂಬದವರು ಸೇರಿ ಮಾಡಿಸಿರುವುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನಿಮ್ಮ ಮತ್ತು ಎದುರುದಾರರ ವಿವಾಹವನ್ನು ಎರಡೂ ಕುಟುಂಬದವರು ಸೇರಿ ಖರ್ಚು ಮಾಡಿರುವುದು ಎಂದರೆ ಸಾಕ್ಷಿ ಇಲ್ಲ ನನ್ನ ತಂದೆಯವರು ಮಾತ್ರ ಖರ್ಚು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು

ಖರ್ಚು ಮಾಡಿ ವಿವಾಹ ಮಾಡಿರುವುದಿಲ್ಲ, ಅದನ್ನು ಒಪ್ಪಿ ಕೊಂಡರೆ ನಿಮ್ಮ ಕೇಸಿಗೆ ಅನಾನುಕೂಲವಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ವಿವಾಹವು ದಿನಾಂಕ 25.06.2014 ರಂದು ಜರುಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-17ರ ಬಿಲ್ .ನಾಂಕ 22.02.2013 ರದ್ದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ನನ್ನ ತಂದೆಯವರು ಮುಂಚಿತವಾಗಿಯೇ ಒಡವೆಗಳನ್ನು ಮಾಡಿಸಿ ಇಟ್ಟಿದ್ದರು ಎಂದು ನುಡಿಯುತ್ತಾರೆ. ಸದರಿ ನಿಪಿ-17 ಮತ್ತು 18ರ ಒಡವೆಗಳು ನಿಮ್ಮ ವಿವಾಹವು ನಿಗಧಿಯಾದಾಗ ಖರೀದಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-17 ಮತ್ತು 20 ರಲ್ಲಿ ಒಂದೇ ಥರಹದ discription ಇದ್ದು ಒಂದೇ ಥರಹದ ಬಿಲ್ ಅನ್ನು ಹಾಜರು ಪಡಿಸಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-19 ರ ಬಿಲ್ ಸಹ ನಿಮ್ಮ ಮತ್ತು ಎದುರದಾರರ ವಿವಾಹ ನಿಗಧಿಯಾಗುವುದಕ್ಕೂ ಮುಂಚಿನ ಬಿಲ್ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-17 ರಿಂದ ನಿಪಿ-25 ರಲ್ಲಿ ಇರುವ ಆಭರಣಗಳೂ ಯಾವುದೂ ಸಹ ನಿಮ್ಮ ಅರ್ಜಿಯಲ್ಲಿ ಮತ್ತು ನಿಪಿ-8ರ ದೂರಿನಲ್ಲಿ ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ಇದೆ ಎಂದು ನುಡಿಯುತ್ತಾರೆ. ನೀವು ಮತ್ತು ನಿಮ್ಮ ತಂದೆಯವರು ಸೇರಿ ಸದರಿ ಕನ್ಯಾಕ ಜ್ಯುವೆಲರಿ ಇವರೊಂದಿಗೆ ಶಾಮೀಲಾಗಿ ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿರುವ ಬಿಲ್ ಗಳು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಪಿ-26ರ ಮಹಲಕ್ಷ್ಮೀ ಜ್ಯುವೆಲರ್ಸ್ ರಸೀದಿಯು ನಿಮ್ಮ ವಿವಾಹದ 8 ತಿಂಗಳ ಮುಂಚಿನ ರಸೀದಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ನಿಪಿ-26 ರಲ್ಲಿ ನಿಮ್ಮ ತಂದೆ, ತಾಯಿ ಮತ್ತು ನಿಮ್ಮ ಹೆಸರು ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಶ್ರೀ ಲಕ್ಷ್ಮೀ ನರಸಿಂಹ ಜ್ಯೂವೆಲರ್ಸ್ ರಸೀದಿಯು ದಿನಾಂಕ 29.12.2014 ಇದ್ದು ಅದು ನಿಮ್ಮ ಮತ್ತು ಎದುರುದಾರರ ವಿವಾಹವಾದ 6 ತಿಂಗಳ ನಂತರ ಎಂದರೆ ಸಾಕ್ಷಿ

ಹೌದು ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ಎದುರುದಾರರು ಕೇಳಿದ್ದರಿಂದ ನನ್ನ ತಂದೆಯವರು ತಂದು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಬಿಲ್ ನಲ್ಲಿ ಯಾರು ಖರೀದಿ ಮಾಡಿರುತ್ತಾರೆ ಎಂದು ಹೆಸರು ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ನಿಪಿ-26ರ ಬಿಲ್ ಅ ನ್ನು ನೀವು ಮತ್ತು ನಿಮ್ಮ ತಂದೆಯವರು ಜ್ಯೂವೆಲರ್ಸ್ ರವರೊಂದಿಗೆ ಶಾಮೀಲಾಗಿ ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿ ಹಾಕಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ ಶ್ರೀ ಲಕ್ಷ್ಮಿ ನರಸಿಂಹ ಜ್ಯೂವೆಲರ್ಸ್ ಬಿಲ್ ಮಾಂಗಲ್ಯ ಸರಕ್ಕೆ ಸಂಬಂಧಪಟ್ಟಿದ್ದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಎದುರುದಾರರು ಚಿನ್ನದ ಮಾಂಗಲ್ಯ ಸರವನ್ನು ಹಾಕಿ ಅವರ ಮನೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮಾಂಗಲ್ಯ ಸರವನ್ನು ಎದುರುದಾರರು ಮದುವೆ ಸಮಯದಲ್ಲೇ ಹಾಕಿದ್ದರಿಂದ ಸದರಿ ನಿಪಿ-26ರ ಬಿಲ್ ಅನ್ನು ಸೃಷ್ಟಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಯಾವುದೇ ಒಡವೆಯನ್ನು ಕೊಟ್ಟಿರಲಿಲ್ಲ ಮದುವೆಯಾದ ಒಂದು ವಾರಕ್ಕೆ ಎಲ್ಲಾ ಕಿತ್ತುಕೊಂಡಿದ್ದರು ಎಂದು ನುಡಿಯುತ್ತಾರೆ. ಯಾವುದೇ ಒಡವೆಯನ್ನು ಕೊಟ್ಟಿರಲಿಲ್ಲ ಮದುವೆಯಾದ ಒಂದು ವಾರಕ್ಕೆ ಎಲ್ಲಾ ಕಿತ್ತುಕೊಂಡಿದ್ದರು ಎಂದು ಇದೇ ಮೊದಲ ಭಾರಿಗೆ ಹೇಳುತ್ತಿದ್ದು ನಿಮ್ಮ ಅರ್ಜಿಯಲ್ಲಿ, ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಮತ್ತು ನಿಪಿ-8ರ ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಹೇಳಿರುವುದಿಲ್ಲ ಎಂದು ಒಪ್ಪಿ ಕೊಂಡರೆ ನಿಮ್ಮ ಕೇಸಿಗೆ ಅನಾನುಕೂಲವಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-27ರ ಬಿಲ್ ಸಹ ನಿಮ್ಮ ವಿವಾಹದ ಮೊದಲಿನ ಬಿಲ್ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ನಿಪಿ-27 ರಲ್ಲಾ ಸಹ ನಿಮ್ಮ ತಂದೆ, ನಿಮಂ ತಾಯಿ ಮತ್ತು ನಿಮ್ಮ ಹೆಸರು ಇರುವುದಿಲ್ಲ ಎಂದರೆ ಸಾಕ್ಷಿ ನನ್ನ ತಾಯಿಯ ಹೆಸರು ಇದೆ ಎಂದು ನುಡಿಯುತ್ತಾರೆ. ನಿಮ್ಮ ತಾಯಿಯ ಹೆಸರು ಏನು

ಎಂದರೆ ಸಾಕ್ಷಿ ರತ್ನಮ್ಮ ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ನನ್ನ ತಾಯಿಗೆ ಎರಡು ಹೆಸರು ಇದ್ದು ರತ್ನಮ್ಮ ಎಂದು ಜಾಸ್ತಿ ಕರೆಯುತ್ತಾರೆ ಎಂದು ನುಡಿಯುತ್ತಾರೆ. ನೀವು ಹಾಕಿರುವ ಎಲ್ಲಾ ಕೇಸುಗಳಲ್ಲೂ ನಿಮ್ಮ ತಾಯಿಯ ಹೆಸರನ್ನು ದೊಡ್ಡಮ್ಮ ಎಂದು ಹೇಳಿದ್ದು ಎಲ್ಲಿಯೂ ಸಹ ರತ್ನಮಂ ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ನಿಪಿ-27 ನಿಮ್ಮ ತಾಯಿಯವರಿಗೆ ಸಂಬಂಧ ಪಟ್ಟಿರುವುದಿಲ್ಲ, ಆದ ಕಾರಣ ನೀವು ನಿಮ್ಮ ತಾಯಿಯ ಹೆಸರು ರತ್ನಮ್ಮ ಎಂದೂ ಹ ಸುಳ್ಳು ಹೇಳುತ್ತಿದ್ದೀರ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದುನುಡಿಯುತ್ತಾರೆ. ಸದರಿ ನಿಪಿ-27 ಯಾವ ಆಭರಣಗಳಿಗೆ ಸಂಬಂಧ ಪಟ್ಟಿರುತ್ತದೆ ಎಂದು ಈಗ ನಿಮಗೆ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ವಾಟೀ ಸವಾಲಿಗೆ ಎದುರುದಾರ ಪರ ವಕೀಲರು ಸಮಯ ಕೋರಿದ್ದರಿಂದ, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**